ಪಿ.ಡಬ್ಲ್ಯೂ -01

ದಿನಾಂಕ.27.07.2021 ಸಾಕ್ಷಿಯನ್ನು ಪುನಃ ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಡಿ.ಜೆ.ಆರ್.ವಕೀಲರಿಂದ</u>

ನಾನು 7 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಸಹಿಗಳನ್ನು ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿಗೆ ನ್ಯಾಯಾಲಯಕ್ಕೆ ಸಲ್ಲಿಸಿದ ದಿನಾಂಕ.07.08.2014 ರ ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತೋರಿಸಿದ್ದು, ಅದರಲ್ಲಿನ ಸಹಿ ತನ್ನದಲ್ಲ ಎಂದು ಅಲ್ಲಗಳೆದಿರುತ್ತಾರೆ. ನಿಮ್ಮ ತಂದೆ ಶಿಕ್ಷಕರಾಗಿದ್ದರು ಎಂದರೆ ಸರಿ. ನಿಮ್ಮ ತಂದೆಯೊಂದಿಗೆ ಕಾಮಸಮುದ್ರದ ಮಲ್ಲಯ್ಯ ಎಂಬುವರು ಸಹ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ಅನಕ್ಷರಸ್ಥರಳಾಗಿದ್ದು, ಹೆಬ್ಬೆಟ್ಟು ಗುರುತು ಹಾಕುತ್ತಿದ್ದರು ಎಂದರೆ ಸರಿ.

ಈ ಹಿಂದೆ ದಿನಾಂಕ.17.04.2021 ರಂದು ತಮ್ಮ ಪಾಟೀ ಸವಾಲು 7 ನೇ ಪುಟದಲ್ಲಿನ 3 ನೇ ಪ್ಯಾರದಲ್ಲಿ ಹೇಳಿದಂತೆ ಮಲ್ಲಯ್ಯ, ವಿರುಪಾಕ್ಷಯ್ಯ, ಕರೆಈರಣ್ಣ, ಎನ್.ಹನುಮಂತಪ್ಪ ಮತ್ತು ಹುಲಿಗೆಪ್ಪರವರ ಸಮಕ್ಷಮದಲ್ಲಿ 1978 ರಲ್ಲಿ ಪಂಚಾಯಿತಿ ಮಾಡಲಾಗಿತ್ತು ಎಂದು ನೀವು ಒಪ್ಪಿಕೊಂಡಿದ್ದು, ಸದರಿ ಪಂಚಾಯಿತಿದಾರರಾದ ಮಲ್ಲಯ್ಯ ಯಾರು ಎಂದರೆ ಸಾಕ್ಷಿ ಅವರು ಕಾಮಸಮುದ್ರದವರು ಎಂದು ಹೇಳುತ್ತಾರೆ. ಸದರಿ ಮಲ್ಲಯ್ಯ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ವಿರುಪಾಕ್ಷಯ್ಯ ರವರು ಸಹ ಕಾಮಸಮುದ್ರದ ವಾಸಿ ಎಂದರೆ ಸಾ ಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಎನ್. ಹನುಮತಂಪ್ಪ ಮತ್ತು ಹುಲಿಗೆಪ್ಪ ಯಾವ ಊರಿನವರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಿನಾಂಕ.12.03.1978 ರ ಕರಾರು ಪತ್ರದಲ್ಲಿ ನೀವು ಸದರಿ ಪಂಚಾಯಿತಿದಾರರ ಸಮಕ್ಷಮ ಒಪ್ಪಿಕೊಂಡು, ನೀವು ಹಾಗೂ ನಿಮ್ಮ ತಾಯಿರವರು ಸದರಿ ದಾಖಲಾತಿಗೆ ಸಹಿ ಮಾಡಿ ನಿಮ್ಮ ತಾಯಿ ಹೆಬ್ಬೆಟ್ಟು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿ ಇರುವ ಸಹಿ ನಿಮ್ಮದೇ ಸಹಿ ಆಗಿದ್ದರು, ದುರುದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿರುವ ಮಲ್ಲಯ್ಯ, ವಿರುಪಾಕ್ಷಯ್ಯ, ಎನ್.ಹನುಮಂತಪ್ಪ ಮತ್ತು ಹುಲಿಗೆಪ್ಪರವರುಗಳು ನಿಮಗೆ ಪರಿಚಯ ಇದ್ದರು, ಪರಿಚಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿರುವ ಸಾಕ್ಷಿದಾರರ ಸಮಕ್ಷಮ ಒಪ್ಪಿ ಕರಾರು ಪತ್ರದಲ್ಲಿ ತೋರಿಸಿರುವ ಸಮಾನುಗಳನ್ನು ಪಡೆದಿದ್ದರು ಇಲ್ಲ ಅಂತ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ದಿನಾಂಕ.12.03.1978 ರ ಪೂರ್ವದಲ್ಲಿ ಕರಾರು ಪತ್ರದಲ್ಲಿ ನಮೂದು ಇರುವ ಸ್ವತ್ತುಗಳು 1 ನೇಪ್ರತಿವಾದಿಯ ಸುಬದ್ಧಿನಲ್ಲಿ ಇದ್ದವು ಎಂದರೆ ಸರಿ. ದಿನಾಂಕ.12.03.1978 ರ ಕರಾರು ಪತ್ರದಲ್ಲಿ ನಮೂದು ಇರುವ ಆಭರಣಗಳು ಈಗಲೂ 1 ನೇ ಪ್ರತಿವಾದಿಯ ಸುಪರ್ತಿನಲ್ಲಿ ಇದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಿನಾಂಕ.12.03.1978 ರ ಕರಾರು ಪತ್ರದಲ್ಲಿ ನಮೂದು ಇರುವ ಆಭರಣಗಳು 1 ನೇ ಪ್ರತಿವಾದಿಯ ಸ್ವಂತ ಆಸ್ತಿಗಳಾ ಅಥವಾ ಒಟ್ಟು ಕುಟುಂಬದ ಆಸ್ತಿಯೋ ಎಂದರೆ ಸಾಕ್ಷಿ ಕುಟುಂಬದ ಆಸ್ತಿ ಎಂದು ಹೇಳುತ್ತಾರೆ. ದಾವೆಯನ್ನು ಕರಾರು ಪತ್ರದಲ್ಲಿ ನಮೂದು ಮಾಡಿರುವ ಆಭರಣಗಳಲ್ಲಿ ಭಾಗ ಕೋರಿ ಹೂಡಿಲ್ಲ. ಕರಾರು ಪತ್ರದಲ್ಲಿ ನಮೂದು ಇರುವ ಆಭರಣಗಳು ಎಲ್ಲವೂ ನಿಮ್ಮ ಸುಬದ್ದಿನಲ್ಲಿ ಇರುವುದರಿಂದ ಅವುಗಳಲ್ಲಿ ನೀವು ಭಾಗ ಕೇಳಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ತವರುಮನೆಗೆ ಮದುವೆಯಾದಗಿನಿಂದಲೂ ಹೋಗಿಲ್ಲ. 1978 ರಿಂದ ನಿಮ್ಮ ತವರು ಮನೆಗಾಗಲೀ, ವ್ಯಾಜ್ಯ ಜಮೀನುಗಳಿಗಾಗಲೀ ಹೋಗೆ ಇಲ್ಲ ಎಂದರೆ ಸರಿ. ನಿಮಗೂ ಹಾಗೂ 1 ನೇ ಪ್ರತಿವಾದಿಗೆ ಜಮೀನುಗಳ ಹಂಚಿಕೆ ಬಗ್ಗೆ ವ್ಯಾಜ್ಯ ಇದೆ ಎಂದರೆ ಸರಿ. ದಿನಾಂಕ.12.03.1978 ರ ಕರಾರು ಪತ್ರದಲ್ಲಿ ನಮೂದಿಸಿರುವ ಆಭರಣಗಳನ್ನು ನಿಮ್ಮ ಭಾಗಕ್ಕೆ ಪಡೆದು, ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿ ಭಾಗಕ್ಕೆ ಬಿಟ್ಟುಕೊಟ್ಟಿರುತ್ತೀರಾ ಎಂದರೆ ಸರಿಯಲ್ಲ. ನಿಮ್ಮ ಮದುವೆ ಕಾಲಕ್ಕೆ ಮದುವೆ ಖರ್ಚಿಗಾಗಿ 1 ನೇ ಪ್ರತಿವಾದಿ ಸಾಲ ಮಾಡಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ ಆಸ್ತಿಯ ಮೇಲೆ ಬ್ಯಾಂಕಿನಲ್ಲಿ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ನಿಮ್ಮ ಮದುವೆ ಖರ್ಚಿಗೆ ಮಾಡಲಾದ ಸಾಲದ ತಿರುವಳಿಗಾಗಿ ಹಾಗೂ ಬ್ಯಾಂಕಿನ ಸಾಲದ ತಿರುವಳಿಗಾಗಿ 1 ನೇ ಪ್ರತಿವಾದಿ ದಾವಾ ತಪಶೀಲು ಸಂಖ್ಯೆ.2 ನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ದಾವಾ ತಪಶೀಲು ಸಂಖ್ಯೆ.2 ನ್ನು 2005 ರಲ್ಲಿ ಮಾರಾಟ ಮಾಡಿರುವ ವಿಚಾರ ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಸಂಖ್ಯೆ.2 ನೀವು ದಾವೆ ಹೂಡುವ ಕಾಲಕ್ಕೆ 3 ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ಇತ್ತು ಎಂದರೆ ಸರಿ. 3 ನೇ ಪ್ರತಿವಾದಿ ಖರೀದಿಸಿದ ದಾವಾ ತಪಶೀಲು ಸಂಖ್ಯೆ.2 ಆಸ್ತಿಯನ್ನು ಈಗ ಮಲ್ಲಿಕಾರ್ಜುನಪ್ಪ ಎಂಬುವರಿಗೆ ನ್ಯಾಯಾಲಯಕ್ಕೆ ದಾವೆ ಹೂಡಿದ ನಂತರ ಮಾರಾಟ ಮಾಡಿರುತ್ತಾರೆ.

ನೀವು ಮಲ್ಲಿಕಾರ್ಜುನಪ್ಪರವರಿಗೆ ಮಾರಾಟ ಮಾಡಿರುವ ದಾಖಲೆಯನ್ನು ಪಡೆದು, ಸದರಿ ಮಲ್ಲಿಕಾರ್ಜುನರಪ್ಪ ರವರನ್ನು ಪಕ್ಷಗಾರರಾಗಿ ಸೇರ್ಪಡೆ ಮಾಡಿದ್ದೀರಾ ಎಂದರೆ ಸಾಕ್ಷಿ ನಮಗೆ ಗೊತ್ತೆ ಇರಲಿಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂಖ್ಯೆ .1 ರಿಂದ 3 ರಲ್ಲಿ ನೀವು ಹಾಗೂ 3 ನೇ ಪ್ರತಿವಾದಿ ಜಂಟೀ ಸ್ವಾಧೀನಾನುಭವದಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ವ್ಯಾಜ್ಯದ ಜಮೀನುಗಳಲ್ಲಿ ನಿಮ್ಮ ಸ್ವಾಧೀನಕ್ಕೆ ತಂಟೆ ತಕರಾರು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸಾಕ್ಷಿ ನಾನು ಹೋಗೆ ಇಲ್ಲ ಎಂದು ಹೇಳುತ್ತಾರೆ. ನೀವು ನಿಮ್ಮ ಭಾಗಕ್ಕೆ ಕರಾರು ಪತ್ರದನ್ವಯ ಆಭರಣಗಳನ್ನು ಪಡೆದುಕೊಂಡಿದ್ದರು, ಕೊಟ್ಟೆ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳಿ, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. 2013 ನೇ ಇಸವಿಯಲ್ಲಿ ನಿಮ್ಮ ಹಾಗೂ 1 ನೇ ಪ್ರತಿವಾದಿಯ ನಡುವೆ ಪಂಚಾಯಿತಿ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

2013 ನೇ ಇಸವಿಯಲ್ಲಿ ದಾವಾ ತಪಶೀಲು ಆಸ್ತಿಗಳಿಗೆ ಭೇಟಿ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 2013 ನೇಇಸವಿಯಲ್ಲಿ ನಿಮ್ಮ ಅಣ್ಣನನ್ನು ಭಾಗ ಕೊಂಡುವಂತೆ ಕೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಚಳ್ಳಕೆರೆ.